


بسم اللهِ الرَّحمٰن الرَّحيم

# ಪ್ರವಾದಿ ಚರಿತ್ರೆ – ಸರಿಯ ಖುರ್‌ತಾ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–12–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಜೀವಿತಕ್ಕೆ ಸಂಬಂಧಪಟ್ಟ ಒಂದು ಯುದ್ಧದ ಬಗ್ಗೆ ಇಂದು ನಾನು ಪ್ರಸ್ತಾಪಿಸುತ್ತೇನೆ. ಈ ಯುದ್ಧವನ್ನು ಸರಿಯ ಖುರ್‌ತಾ ಎಂದು ಕರೆಯಲಾಗುತ್ತದೆ. ಈ ಯುದ್ಧ ಹಿಜರೀ 6, ಮುಹರ್ರಮ್ 10ರಲ್ಲಿ ನಡೆದಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ)ರನ್ನು ಮೂವತ್ತು ಸವಾರರ ಜೊತೆಗೆ ಖುರ್‌ತಾ ಎಂಬ ಪ್ರದೇಶಕ್ಕೆ ಕಳುಹಿಸಿದರು. ಈ ಯುದ್ಧಕ್ಕಾಗಿ ಅವರು ಹತ್ತೊಂಬತ್ತು ದಿನ ಮದೀನದಿಂದ ಹೊರಗೆ ಇದ್ದರು. ಹಿಜರೀ 6, ಮುಹರ್ರಮ್ 29ರಂದು ಅವರು ಮದೀನಕ್ಕೆ ಮರಳಿ ಬಂದರು.

ಇದರ ವಿವರಣೆಯಲ್ಲಿ ಅನೇಕ ಗ್ರಂಥಗಳಿಂದ ಮತ್ತು ಚರಿತ್ರೆಗಳಿಂದ ಉಲ್ಲೇಖಿಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: ಹಿಜರೀ 6ರ ಆರಂಭದಲ್ಲೇ ಚಂದ್ರಮಾನ ವರ್ಷದ ಮೊದಲ ತಿಂಗಳು ಆದ ಮುಹರ್ರಮ್‌ನ ಆರಂಭದ ದಿನಾಂಕಗಳಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ನಜದ್ ನಿವಾಸಿಗಳಿಂದ ಅಪಾಯದ ಮಾಹಿತಿಗಳು ಲಭಿಸಿದುವು. ಈ ಅಪಾಯ ಖುರ್‌ತಾ ಗೋತ್ರದ ಕಡೆಯಿಂದ ಆಗಿತ್ತು. ಅದು ಬನೂ ಬಕರ್ ಗೋತ್ರದ ಒಂದು ಶಾಖೆಯಾಗಿತ್ತು ಮತ್ತು ಅದು ನಜದಿನ ಪ್ರದೇಶದ ಝುರಿಯ್ಯ ಎಂಬ ಸ್ಥಳದಲ್ಲಿ ನೆಲೆಸಿತು. ಅದು ಮದೀನದಿಂದ ಏಳು ದಿನಗಳ ಯಾತ್ರೆಯನ್ನು ಮಾಡುವಷ್ಟು ದೂರದಲ್ಲಿ ಇತ್ತು.

ಅದು ಶತ್ರು ಸಮುದಾಯವಾಗಿತ್ತು ಎಂದೂ ಮದೀನದ ಮೇಲೆ ದಾಳಿ ನಡೆಸಲು ಯೋಜನೆ ಮಾಡುತ್ತಿತ್ತು ಎಂದೂ ಅದನ್ನು ತಡೆಯಲು ಹಝ್ರತ್ ಪೈಗಂಬರ್(ಸ) ಸೇನೆಯನ್ನು ಕಳುಹಿಸಿದರು ಎಂದೂ ವಿವರಿಸಲಾಗಿದೆ. ಅಲ್ಲೂ ಮಹಿಳೆಯರಿಗೂ ಮತ್ತು ಮಕ್ಕಳಿಗೂ ಯಾವುದೇ ಹಾನಿ ಉಂಟುಮಾಡದೇ ಸೌಮ್ಯವಾಗಿ ವರ್ತಿಸಲಾಯಿತು.

ಈ ವೇಳೆ ಸುಮಾಮ ಬಿನ್ ಉಸಾಲ್‌ರನ್ನು ಬಂಧಿಸಲಾದ ಬಗ್ಗೆ ಮತ್ತು ಅವರು ಇಸ್ಲಾಂ ಸ್ವೀಕಾರ ಮಾಡಿದ ಬಗ್ಗೆ ಪ್ರಸ್ತಾಪವಿದೆ. ಇದರ ವಿವರಣೆಯಲ್ಲಿ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆಯಲಾಗಿದೆ. ಸರಿಯ ಖುರ್‌ತಾ ಯುದ್ಧದಿಂದ ಮರಳಿ ಬರುವಾಗ ಸುಮಾಮ ಬಿನ್ ಉಸಾಲ್‌ರನ್ನು ಬಂಧಿಸಲಾದ ಘಟನೆ ನಡೆಯಿತು. ಒಮ್ಮೆ ಹಝ್ರತ್ ಪೈಗಂಬರ್(ಸ)ರ ಒಬ್ಬ ದೂತ ಆತನ ಪ್ರದೇಶಕ್ಕೆ ಹೋದಾಗ ಆತನು ಯುದ್ಧದ ಎಲ್ಲ ಕಾನೂನುಗಳನ್ನು ಕಡೆಗಣಿಸಿ ದೂತನನ್ನು ವಧಿಸಲು ಯೋಜನೆ ಹಾಕಿದ್ದನು. ಮಾತ್ರವಲ್ಲ ಆತನು ಒಮ್ಮೆ ಹಝ್ರತ್ ಪೈಗಂಬರ್(ಸ)ರನ್ನು ಕೂಡ ವಧಿಸಲು ತೀರ್ಮಾನಿಸಿದ್ದನು. ಮುಹಮ್ಮದ್ ಬಿನ್ ಮಸ್ಲಮ(ರ)ರ ಸಂಘ ಸುಮಾಮನನ್ನು ಬಂಧಿಸಿ ತಂದಾಗ ಸಂಘದವರಿಗೆ ಆತನು ಯಾರೆಂದು ಗೊತ್ತಿರಲಿಲ್ಲ. ಅವರು ಕೇವಲ ಸಂದೇಹದ ಮೇಲೆ ಆತನನ್ನು ಬಂಧಿಸಿದ್ದರು. ಆತನು ಸಹ ಬಹಳ ಬುದ್ಧಿವಂತಿಕೆಯಿಂದ ತನ್ನನ್ನು ಯಾರೂ ಗುರುತಿಸದಂತೆ ನೋಡಿಕೊಂಡಿದ್ದನು ಎಂದು ತಿಳಿದುಬರುತ್ತದೆ. ಏಕೆಂದರೆ ತಾನು ಇಸ್ಲಾಮಿನ ವಿರುದ್ಧ ಅಪಾಯಕಾರಿ ಅಪರಾಧಗಳನ್ನು ಮಾಡಿರುವೆನು ಎಂದೂ ತಾನು ಯಾರೆಂದು ಇಸ್ಲಾಮಿನ ಈ ಅಭಿಮಾನಿ ಸೈನಿಕರಿಗೆ ಗೊತ್ತಾದರೆ ಬಹುಶಃ ಅವರು ತನ್ನೊಂದಿಗೆ ಕಠಿಣವಾಗಿ ವರ್ತಿಸುವರು ಅಥವಾ ವಧಿಸುವರು ಎಂದೂ ಆತನಿಗೆ ಗೊತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಆತನೊಂದಿಗೆ ಉತ್ತಮವಾಗಿ ವರ್ತಿಸುವರು ಎಂದು ಆತನಿಗೆ ಪ್ರತೀಕ್ಷೆಯಿತ್ತು. ಹೀಗೆ ಮದೀನಕ್ಕೆ ಮರಳುವ ತನಕ ಮುಹಮ್ಮದ್ ಬಿನ್ ಮಸ್ಲಮ(ರ)ರ ಸಂಘಕ್ಕೆ ಆತನು ಯಾರೆಂದು ಗೊತ್ತಿರಲಿಲ್ಲ.

ಮದೀನಕ್ಕೆ ತಲುಪಿ ಸುಮಾಮನನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ತರಲಾದಾಗ ಹಝ್ರತ್ ಪೈಗಂಬರ್(ಸ) ಆತನನ್ನು ನೋಡಿದೊಡನೆ ಗುರುತಿಸಿದರು. 'ಇದು ಯಾರೆಂದು ಗೊತ್ತೇ? ಎಂದು ಮುಹಮ್ಮದ್ ಬಿನ್ ಮಸ್ಲಮ(ರ) ಮತ್ತು ಅವರ ಸಂಘದವರೊಡನೆ ಹಝ್ರತ್ ಪೈಗಂಬರ್(ಸ) ಕೇಳಿದರು. ಅವರು ಗೊತ್ತಿಲ್ಲವೆಂದು ಹೇಳಿದಾಗ ಆತನು ಯಾರೆಂದು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿಕೊಟ್ಟರು. ಅನಂತರ ಹಝ್ರತ್ ಪೈಗಂಬರ್(ಸ) ತನ್ನ ಅಭ್ಯಾಸದಂತೆ ಸುಮಾಮನೊಂದಿಗೆ ಉತ್ತಮವಾಗಿ ವರ್ತಿಸಲು ಆದೇಶ ನೀಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಮನೆಯೊಳಗೆ ಹೋಗಿ ಹೀಗೆ ಹೇಳಿದರು: ಊಟಕ್ಕಾಗಿ ತಯಾರಾಗಿ ಇರುವುದನ್ನು ಸುಮಾಮನಿಗಾಗಿಯೂ ಕಳುಹಿಸಿರಿ. ಅನಂತರ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೀಗೆಯೂ ನಿರ್ದೇಶಿಸಿದರು: 'ಸುಮಾಮನನ್ನು ಯಾವುದಾದರೂ ಮನೆಯಲ್ಲಿ ಇರಿಸುವುದಕ್ಕೆ ಬದಲಿಗೆ ಮಸ್ಜಿದ್ ನಬವಿಯ ಅಂಗಣದಲ್ಲಿಯೇ ಯಾವುದಾದರೂ ಕಂಬದೊಂದಿಗೆ ಕಟ್ಟಿ ಬಂಧನದಲ್ಲಿ ಇರಿಸಿರಿ.' ಹಝ್ರತ್ ಪೈಗಂಬರ್(ಸ)ರ ಸಭೆಗಳು ಮತ್ತು ಮುಸ್ಲಿಮರ ನಮಾಝ್‌ಗಳು ಸುಮಾಮನು ಕಾಣುವಂತಾಗಲಿ ಮತ್ತು ಆತನ ಹೃದಯ ಈ ಆಧ್ಯಾತ್ಮಿಕ ದೃಶ್ಯಗಳಿಂದ ಪ್ರಭಾವಿತಗೊಂಡು ಇಸ್ಲಾಮಿನ ಕಡೆಗೆ ವಾಲುವಂತಾಗಲಿ ಎಂಬ ಉದ್ದೇಶದಿಂದ ಹಝ್ರತ್ ಪೈಗಂಬರ್(ಸ) ಹೀಗೆ ನಿರ್ದೇಶಿಸಿದ್ದರು.

ಆ ದಿನಗಳಲ್ಲಿ ಹಝ್ರತ್ ಪೈಗಂಬರ್(ಸ) ಪ್ರತಿದಿನ ಬೆಳಿಗ್ಗೆ ಸುಮಾಮನ ಸಮೀಪಕ್ಕೆ ಹೋಗಿ ಆತನ ಕ್ಷೇಮವನ್ನು ವಿಚಾರಿಸಿದ ನಂತರ ಹೀಗೆ ಕೇಳುತ್ತಿದ್ದರು: 'ಸುಮಾಮ, ಈಗ ನಿನ್ನ ಉದ್ದೇಶವೇನು ಎಂದು ಹೇಳು.' ಆಗ ಸುಮಾಮ ಹೀಗೆ ಉತ್ತರಿಸುತ್ತಿದ್ದನು: 'ಹೇ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ), ನೀವು ನನ್ನನ್ನು ವಧಿಸುವುದಾದರೆ ನಿಮಗೆ ಅದರ ಅಧಿಕಾರವಿದೆ. ಏಕೆಂದರೆ ನನ್ನ ವಿರುದ್ಧ ಕೊಲೆಯ ಆರೋಪವಿದೆ. ಆದರೆ ನೀವು ಔದಾರ್ಯ ತೋರಿಸುವುದಾದರೆ ನೀವು ನನ್ನನ್ನು ಕೃತಜ್ಞತೆಯುಳ್ಳವನಾಗಿ ಕಾಣುವಿರಿ. ಅಥವಾ ನೀವು ನನ್ನಿಂದ ಪರಿಹಾರ ಧನವನ್ನು ಪಡೆಯಲು ಬಯಸುವುದಾದರೆ ನಾನು ಪರಿಹಾರ ಧನವನ್ನು ನೀಡಲು ಕೂಡ ತಯಾರಿದ್ದೇನೆ.' ಮೂರು ದಿನಗಳ ತನಕ ಇದೇ ಪ್ರಶ್ನೋತ್ತರ ನಡೆಯುತ್ತಿತ್ತು. ಕೊನೆಗೆ ಮೂರನೇ ದಿನ ಸುಮಾಮನ ಕಟ್ಟು ಬಿಚ್ಚಿ ಸ್ವತಂತ್ರಗೊಳಿಸಲು ಹಝ್ರತ್ ಪೈಗಂಬರ್(ಸ) ಸ್ವತಃ ಸಹಾಬಿಯರೊಡನೆ ಹೇಳಿದರು. ಸಹಾಬಿಯರು ಕೂಡಲೇ ಆತನನ್ನು ಸ್ವತಂತ್ರಗೊಳಿಸಿದರು ಮತ್ತು ಸುಮಾಮ ಬೇಗ ಬೇಗನೆ ಮಸೀದಿಯಿಂದ ಹೊರಟು ಹೊರಗೆ ಹೋದನು. ಈಗ ಆತನು ಸ್ವದೇಶಕ್ಕೆ ಮರಳಿ ಹೋಗುವನು ಎಂದು ಬಹುಶಃ ಸಹಾಬಿಯರು ಭಾವಿಸಿರಬಹುದು. ಆದರೆ ಸುಮಾನನ ಹೃದಯವನ್ನು ಗೆಲ್ಲಲಾಗಿದೆ ಮತ್ತು ಈಗ ಆತನ ಮೇಲೆ ತನ್ನ ಪರಿಶುದ್ಧ ಶಕ್ತಿಯ ಪ್ರಭಾವ ಉಂಟಾಗಿದೆ ಎಂದು ಹಝ್ರತ್ ಪೈಗಂಬರ್(ಸ) ತಿಳಿದಿದ್ದರು. ಅದೇ ಸತ್ಯವಾಯಿತು. ಆತನು ಸಮೀಪದ ಒಂದು ತೋಟಕ್ಕೆ ಹೋಗಿ ಅಲ್ಲಿಂದ ಸ್ನಾನ ಮಾಡಿ ಮರಳಿ ಬಂದನು. ಬಂದ ಕೂಡಲೇ ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಬೈಅತ್ ಮಾಡಿಕೊಂಡನು. ಅನಂತರ ಆತನು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದನು: ಯಾ ರಸೂಲಲ್ಲಾಹ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ), ಒಂದು ಕಾಲವಿತ್ತು. ಆಗ ನನಗೆ ಪೂರ್ತಿ ಲೋಕದಲ್ಲಿ ನಿಮ್ಮೊಂದಿಗೆ, ನಿಮ್ಮ ದೀನಿನೊಂದಿಗೆ, ನಿಮ್ಮ ಪಟ್ಟಣದೊಂದಿಗೆ ಅತ್ಯಂತ ಹೆಚ್ಚಿನ ಹಗೆಯಿತ್ತು. ಆದರೆ ಈಗ ನನಗೆ ನೀವು, ನಿಮ್ಮ ದೀನ್ ಮತ್ತು ನಿಮ್ಮ ಪಟ್ಟಣ ಅತ್ಯಂತ ಹೆಚ್ಚು ಪ್ರಿಯವಾಗಿಬಿಟ್ಟಿದೆ.

ಮುಸ್ಲಿಮನಾದ ನಂತರ ಸುಮಾಮ ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಿಮ್ಮ ಜನರು ನನ್ನನ್ನು ಬಂಧಿಸಿದ ವೇಳೆ ನಾನು ಕಅ್‌ಬ ಭವನಕ್ಕೆ ಉಮ್ರ ಮಾಡಲಿಕ್ಕಾಗಿ ಹೋಗುತ್ತಿದ್ದೆ. ಈಗ ನನಗೆ ನಿಮ್ಮ ಆದೇಶವೇನು? ಹಝ್ರತ್ ಪೈಗಂಬರ್(ಸ) ಆತನಿಗೆ ಉಮ್ರ ಮಾಡಲು ಅನುಮತಿ ಕೊಟ್ಟರು ಮತ್ತು ಆತನಿಗಾಗಿ ದುಆ ಮಾಡಿದರು. ಅನಂತರ ಸುಮಾಮ ಮಕ್ಕದ ಕಡೆಗೆ ಹೊರಟರು. ಅಲ್ಲಿಗೆ ತಲುಪಿ ಸುಮಾಮ ವಿಶ್ವಾಸದ ಆವೇಶದಲ್ಲಿ ಖುರೈಶಿಯರಿಗೆ ಬಹಿರಂಗವಾಗಿಯೇ ತಬ್ಲೀಗ್ ಮಾಡಲು ಆರಂಭಿಸಿದರು. ಖುರೈಶಿಯರು ಈ ದೃಶ್ಯವನ್ನು ನೋಡಿದಾಗ ಅವರಿಗೆ ತುಂಬಾ ಕೋಪಬಂತು ಮತ್ತು ಅವರು ಸುಮಾಮನನ್ನು ಹಿಡಿದು ವಧಿಸಲು ನಿರ್ಧರಿಸಿದರು. ಆದರೆ ಆತನು ಯಮಾಮದ ಸರದಾರ ಆಗಿರುವನು ಮತ್ತು ಯಮಾಮದೊಂದಿಗೆ ಮಕ್ಕಕ್ಕೆ ಗಾಢವಾದ ವ್ಯಾಪಾರ ಸಂಬಂಧಗಳು ಇತ್ತು ಎಂಬ ಕಾರಣದಿಂದ ಅವರು ಈ ನಿರ್ಧಾರದಿಂದ ಹಿಂದೆ ಸರಿದರು ಮತ್ತು ಆತನನ್ನು ನಿಂದಿಸಿ ಬೈದು ಬಿಟ್ಟುಬಿಟ್ಟರು. ಆದರೆ ಸುಮಾಮನಿಗೆ ತುಂಬಾ ಆವೇಶವಿತ್ತು. ಖುರೈಶಿಯರು ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರೊಡನೆ ಮಾಡುತ್ತಿದ್ದ ದೌರ್ಜನ್ಯಗಳೆಲ್ಲವೂ ಸುಮಾಮನ ಕಣ್ಣುಗಳ ಮುಂದೆ ಇದ್ದುವು. ಆತನು ಮಕ್ಕಾದಿಂದ ಹೊರಡುವಾಗ ಖುರೈಶಿಯರೊಡನೆ ಹೀಗೆ ಹೇಳಿದರು: ಅಲ್ಲಾಹನಾಣೆ, ಇನ್ನು ಮುಂದೆ ಹಝ್ರತ್ ಪೈಗಂಬರ್(ಸ) ಅನುಮತಿ ಇಲ್ಲದೆ ಯಮಾಮದಿಂದ ಧಾನ್ಯದ ಒಂದು ಕಾಳು ಕೂಡ ಬರದು.

ತನ್ನ ದೇಶಕ್ಕೆ ತಲುಪಿದ ನಂತರ ಸುಮಾಮ ಮಕ್ಕಾದ ಕಡೆಗೆ ಹೋಗುವ ಯಾತ್ರಾ ಸಂಘಗಳನ್ನು ತಡೆದನು. ಮಕ್ಕಾದ ಆಹಾರದ ಹಿರಿಯ ಪಾಲು ಯಮಾಮದ ಕಡೆಯಿಂದ ಬರುತ್ತಿತ್ತು. ಆದ್ದರಿಂದ ಈ ವ್ಯಾಪಾರ ನಿಂತು ಹೋದಾಗ ಮಕ್ಕದ ಖುರೈಶಿಯರು ಕಠಿಣವಾದ ವಿಪತ್ತಿಗೆ ತುತ್ತಾದರು. ಹೆಚ್ಚು ಕಾಲ ಕಳೆಯಲಿಲ್ಲ, ಅವರು ಗಾಬರಿಗೊಂಡು ಹಝ್ರತ್ ಪೈಗಂಬರ್(ಸ)ರಿಗೆ ಹೀಗೆ ಪತ್ರ ಬರೆದರು: ನೀವು ಸದಾ ಸಂಬಂಧಿಕರೊಡನೆ ಕರುಣೆದೋರಲು ಆದೇಶ ನೀಡುತ್ತೀರಿ. ನಾವು ನಿಮ್ಮ ಸಹೋದರರು ಮತ್ತು ಸಂಬಂಧಿಕರು ಆಗಿರುವೆವು. ನಮ್ಮನ್ನು ಈ ವಿಪತ್ತಿನಿಂದ ಪಾರು ಮಾಡಿರಿ.

ಆ ವೇಳೆ ಮಕ್ಕಾದ ಖುರೈಶಿಯರು ಎಷ್ಟು ಗಾಬರಿಗೊಂಡಿದ್ದರು ಎಂದರೆ, ಅವರು ಈ ಪತ್ರವನ್ನು ಮಾತ್ರ ಸಾಕೆಂದು ಭಾವಿಸದೇ ತಮ್ಮ ಸರದಾರ ಅಬೂಸುಫ್‌ಯಾನ್‌ರನ್ನು ಕೂಡ ಹಝ್ರತ್ ಪೈಗಂಬರ್(ಸ)ರ ಬಳಿಗೆ ಕಳುಹಿಸಿದರು. ಅವರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹೋಗಿ ಬಹಳಷ್ಟು ರೋದಿಸಿದರು ಮತ್ತು ತಮ್ಮ ಕಷ್ಟಗಳನ್ನು ವಿವರಿಸಿ ದಯೆದೋರಲು ಅಂಗಲಾಚಿದರು. ಆಗ ಮಕ್ಕಾ ನಿವಾಸಿಗಳ ಆಹಾರ ಸಾಮಾನುಗಳಿರುವ ವ್ಯಾಪಾರ ತಂಡಗಳನ್ನು ತಡೆಯದಿರಲು ಹಝ್ರತ್ ಪೈಗಂಬರ್(ಸ) ಸುಮಾಮ ಬಿನ್ ಉಸಾಲ್‌ನಿಗೆ ನಿರ್ದೇಶನವನ್ನು ಕಳುಹಿಸಿದರು. ಹೀಗೆ ಈ ವ್ಯಾಪಾರ ಪುನಃ ಜಾರಿಯಾಯಿತು ಮತ್ತು ಮಕ್ಕಾ ನಿವಾಸಿಗಳಿಗೆ ಈ ವಿಪತ್ತಿನಿಂದ ಮುಕ್ತಿ ಲಭಿಸಿತು.

(ಹುಝೂರ್ ಹೇಳಿದರು:) ಈ ವಿಷಯ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

(ಅನಂತರ ಹುಝೂರ್ ಯು.ಕೆ.ಯ ಸನ್ಮಾನ್ಯ ಅಬ್ದುಲ್ಲತೀಫ್ ಸಾಹಿಬ್‌ರ ಜನಾಝ ಹಾಝಿರ್ ಮತ್ತು ಇತರ ಐವರು ದಿವಂಗತರ ಜನಾಝ ಗ್ವಾಯಿಬ್ ನಿರ್ವಹಿಸುವುದಾಗಿ ಹೇಳಿದರು. ಅವರಲ್ಲಿ ಇಬ್ಬರು ಶಹೀದ್ ಆಗಿದ್ದರು. ಡಿಸೆಂಬರ್ 5ರಂದು ರಾವಲ್‌ಪಿಂಡಿಯ ಸನ್ಮಾನ್ಯ ಮಂಝೂರ್ ಅಹ್ಮದ್ ಸಾಹಿಬ್‌ರ ಪುತ್ರನಾದ ಸನ್ಮಾನ್ಯ ತಯ್ಯಿಬ್ ಅಹ್ಮದ್ ಸಾಹಿಬ್‌ರನ್ನು ಅಹ್ಮದಿಯ್ಯತ್ತಿನ ಒಬ್ಬ ಎದುರಾಳಿ ಕೊಡಲಿಯಿಂದ ಹಲ್ಲೆ ನಡೆಸಿ ಶಹೀದ್ ಮಾಡಿದ್ದನು ಮತ್ತು ಪೆಲಸ್ತೀನಿನ ಗಾಝದ ಸನ್ಮಾನ್ಯ ಮುಹನ್ನದ್ ಮುಅಯ್ಯದ್ ಅಬೂ ಅವಾದ್ ಸಾಹಿಬ್‌ರು ಒಂದು ಡ್ರಾನ್ ದಾಳಿಯ ಕಾರಣದಿಂದ ಇಪ್ಪತ್ತನೇ ವಯಸ್ಸಿನಲ್ಲಿ ಶಹೀದ್ ಆದರು. ಅದೇ ರೀತಿಯಲ್ಲಿ ಅಮೇರಿಕದ ಮಾಜಿ ನಾಇಬ್ ಅಮೀರ್ ಆದ ದಿವಂಗತ ಡಾಕ್ಟರ್ ಅಹ್ಮದ್ ಮಲಿಕ್ ಸಾಹಿಬ್, ಮುಕರ್ರಮ್ ಬಶೀರ್ ಅಹ್ಮದ್ ಲೂದೀ ಇಬ್ನು ಮಿಯಾನ್

ಮುಹಮ್ಮದ್ ಶಫೀ ಸಾಹಿಬ್ ಮತ್ತು ದರ್‌ವೇಶ್ ಆಗಿದ್ದ ಮೌಲವಿ ಮುಹಮ್ಮದ್ ಅಯ್ಯೂಬ್ ಬಟ್ ಸಾಹಿಬ್‌ರ ಬಗ್ಗೆ ಹುಝೂ಼ರ್ ಪ್ರಸ್ತಾಪಿಸಿದರು.)

(ದರ್‌ವೇಶ್ ಆಗಿದ್ದ ಮೌಲವಿ ಅಯ್ಯೂಬ್ ಬಟ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂ಼ರ್ ಹೀಗೆ ಹೇಳಿದರು:) ಅವರ ತಾಯಿಯಾದ ಸನ್ಮಾನ್ಯ ಕರೀಂ ಬೀಬೀ ಸಾಹಿಬ ರವರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ದಿವಂಗತರ ಸ್ವಂತ ಬರಹದ ಪ್ರಕಾರ ಅವರು ಯುವಕನಾಗಿದ್ದಾಗ ಹಝ್ರತ್ ಪೈಗಂಬರ್(ಸ) ಕುದುರೆಯಲ್ಲಿ ಸವಾರರಾಗಿದ್ದಾಗಿ ಕನಸಿನಲ್ಲಿ ಕಂಡಿದ್ದರು. ಅವರಿಗೆ ದೀನಿನ ಸೇವೆ ಮಾಡುವ ಸೌಭಾಗ್ಯ ಲಭಿಸುವುದು ಎಂದು ಈ ಕನಸನ್ನು ವ್ಯಾಖ್ಯಾನಿಸುತ್ತಾ ಅವರ ತಾಯಿ ಹೇಳಿದ್ದರು. 1939ರಲ್ಲಿ ಮೌಲವಿ ಸಾಹಿಬ್‌ರು ತನ್ನ ಜೀವಿತವನ್ನು ವಖ್ಫ್ ಮಾಡಿದರು. ಅನಂತರ ಇರಾನಿಗೆ ಹೋಗಲು ಅವರಿಗೆ ಜಮಾಅತ್ ಆದೇಶ ನೀಡಿತು. ಅಲ್ಲಿ ಐದು ವರ್ಷಗಳ ಕಾಲ ದೀನಿನ ಸೇವೆ ಮಾಡಿದರು. ಅನಂತರ ಅಫ್‌ಘಾನಿಸ್ತಾನಿನ ಕಾಬುಲಿಗೆ ಹೋಗಲು ಅವರಿಗೆ ಆದೇಶ ನೀಡಲಾಯಿತು. ಕಾಬುಲಿಗೆ ಹೋಗುವ ಮಾರ್ಗದಲ್ಲಿ ಕೊಯಟ್ಟಾ ತಲುಪಿದಾಗ, ಅವರನ್ನು ಖಾದಿಯಾನಿಗೆ ಕರೆಯಲಾಗಿದೆ ಎಂದು ಕೊಯಟ್ಟಾ ಜಮಾಅತಿನ ಅಮೀರ್ ಅವರೊಡನೆ ಹೇಳಿದರು. ಅದು ಭಾರತ ವಿಭಜನೆಯ ಕಾಲಘಟ್ಟವಾಗಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹಿಜ್ರತ್ ಮಾಡಿ ಲಾಹೋರಿನಲ್ಲಿ ಇದ್ದರು. ಮೌಲವಿ ಸಾಹಿಬ್‌ರು ಲಾಹೋರಿಗೆ ತಲುಪಿದಾಗ ಅವರೊಡನೆ ಹೀಗೆ ಹೇಳಲಾಯಿತು: 'ಖಾದಿಯಾನಿಗೆ ಹೋಗಲು ಇದು ಕೊನೆಯ ಟ್ರಕ್ ಆಗಿದೆ. ಇದರ ನಂತರ ಬಹುಶಃ ಯಾವುದೇ ಟ್ರಕ್ ಹೋಗದು. ಆದ್ದರಿಂದ ನೀವು ಇದರಲ್ಲಿ ಖಾದಿಯಾನಿಗೆ ಹೋಗಿರಿ.' ಅಲ್ಲಿಗೆ ತಲುಪಿ ಅವರಿಗೆ ಅನೇಕ ಜಾಗಗಳಲ್ಲಿ ಸಂರಕ್ಷಣೆಯ ಡ್ಯೂಟಿಗಳನ್ನು ವಹಿಸಲು ಸೌಭಾಗ್ಯ ಲಭಿಸಿತು. ಅನಂತರ ಅವರನ್ನು ಹಝ್ರತ್ ಮುಸ್ಲಿಹ್ ಮೌಊದ್(ರ)ರ ನಿರ್ದೇಶನ ಪ್ರಕಾರ ಭಾರತದಲ್ಲಿ ತಬ್ಲೀಗ್ ಮುಅಲ್ಲಿಮ್ ಎಂಬ ನೆಲೆಯಲ್ಲಿ ಉತ್ತರ ಪ್ರದೇಶದ ಜಾನ್ಸಿಗೆ ಕಳುಹಿಸಲಾಯಿತು. ಅಲ್ಲಿ ಅವರು ಅತ್ಯುತ್ತಮವಾಗಿ ತಬ್ಲೀಗ್ ಮಾಡಿದರು.

ಭಾರತದಲ್ಲಿ ಅವರಿಗೆ ಅನೇಕ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಜಮಾಅತಿನ ಸೇವೆ ಸಲ್ಲಿಸುತ್ತಿದ್ದ ಕಾಲದಲ್ಲೇ ಅವರು ಹೋಮಿಯೋಪತಿಯಲ್ಲಿ ಡಿಗ್ರಿ ಪಡೆದರು. ಅವರ ಮೂಲಕ ಅನೇಕ ಸೌಭಾಗ್ಯವಂತರಿಗೆ ಅಹ್ಮದಿಯ್ಯತ್ ಸ್ವೀಕಾರ ಮಾಡಲು ಭಾಗ್ಯ ಲಭಿಸಿತು. ಅವರ ಒಬ್ಬ ಪುತ್ರನಾದ ಡಾಕ್ಟರ್ ಮಹ್ಮೂದ್ ಅಹ್ಮದ್ ಬಟ್ ಸಾಹಿಬ್ ಮತ್ತು ಅವರ ಸೊಸೆಯಾದ ಡಾಕ್ಟರ್ ಮಂಜು ಬಟ್ ಸಾಹಿಬ ವಖ್ಫೆ ಝಿ಼ಂದಗಿ ಆಗಿರುವರು. ಅವರಿಬ್ಬರೂ ದೀರ್ಘ ಕಾಲ ಘಾನದಲ್ಲಿ ಸೇವೆ ಸಲ್ಲಿಸಿದ್ದರು. ಇತ್ತೀಚೆಗೆ ಅವರಿಬ್ಬರು ಖಾದಿಯಾನಿನ ನೂರ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅದೇ ರೀತಿಯಲ್ಲಿ ಅವರ ಮತ್ತೊಬ್ಬ ಪುತ್ರ ಸಹ ಅಮೇರಿಕದಲ್ಲಿ ಡಾಕ್ಟರ್ ಆಗಿರುವರು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅವರ ಮಕ್ಕಳಿಗೂ ಸಂತಾನಗಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۞ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak'***, *Islamabad*, *Tilford*, U.K. On 13-12-2024

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian



**Email**: *khutuba.kannada@gmail.com*



**You can find all the Sermons archived at**: www.alislam.org/friday-sermon